ಎಂ ವಿ ಸಿ ನಂ. 250/2022

ಪಿ ಡಬ್ಲ್ಯು 1

ದಿನಾಂಕ 03-10-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: 4 ನೇ ಎದುರುದಾರರ ಪರ: ಶ್ರೀ ಎಂ ವೈ ಎಸ್ ವಕೀಲರಿಂದ:</u>

ನನ್ನ ಗಂಡನಿಗೆ ಆದ ಅಪಘಾತದ ಬಗ್ಗೆ ನನ್ನ ಮಾವ ತುಂಬೇಗೌಡರವರು ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಪೋಲೀಸರು ತನಿಖೆ ಮಾಡಿ ಕೆಎ-28 ಸಿ-0279 ರ ವಾಹನದ ಚಾಲಕನ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತದ ವಿಚಾರವಾಗಿ ನನ್ನ ಗಂಡನ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದಿಲ್ಲ. ನನ್ನ ಗಂಡನಿಗೆ ಅಪಘಾತವಾದ ಸಮಯದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡಲು ಸೂಕ್ತವಾದ ಚಾಲನಾ ಪರವಾನಿಗಿ ಇತ್ತು. ಸದರಿ ದಾಖಲಾತಿಯನುನ ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ತನ್ನ ಬಳಿ ಇದ್ದ ಮೂಲ ಚಾಲನಾ ಪರವಾನಿಗಿ ಮತ್ತು ಅದಕ್ಕೆ ಸಂಬಂದಪಟ್ಟ ನೋಟರೀಕೃತ ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ನೋಟರೀಕೃತ ಚಾಲನಾ ಪರವಾನಿಗಿಯನ್ನು ನಿಪಿ-20 ಎಂದು ಗುರುತಿಸಲಾಯಿತು. ಮೂಲ ಚಾಲನಾ ಪರವಾನಿಗಿಯನ್ನು ವಾಪಸು ನೀಡಲಾಯಿತು. ನನ್ನ ಗಂಡ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಗಂಡ ಡಿಪ್ಲೋಮಾ ಇನ್ ನರ್ಸಿಂಗ್ ಮಾಡಿದ್ದರು. ನನ್ನ ಗಂಡನಿಗೆ

ಬರುತ್ತಿದ್ದ ವೇತನವನ್ನು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಅಪಘಾತದ ಕಾಲದಲ್ಲಿ ನನ್ನ ಗಂಡನಿಗೆ ಸುಮಾರು 45-50 ವರ್ಷವಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ತನ್ನ ಬಳಿ ಇದ್ದ ಮೃತ ಚಂದ್ರಕಾಂತ್ ರವರ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಮತ್ತು ನೋಟರೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ನೋಟರೀಕೃತ ಅಂಕಪಟ್ಟಿಯನ್ನು ನಿಪಿ-21 ಎಂದು ಗುರುತಿಸಲಾಯಿತು. ಮೂಲ ಅಂಕಪಟ್ಟಿಯನ್ನು ವಾಪಸು ನೀಡಲಾಯಿತು. ಸದರಿ ಅಪಘಾತ 1 ನೇ ಎದುರುದಾರರ ತಪ್ಪಿನಿಂದ ಆಗಿರುವುದರಿಂದ 4 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆ ಹಾಜರುಪಡಿಸಿ ಸುಳ್ಳು ಸಾಕ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರದನ್ಯಾದಂ., ಕಡೂರು.**